ಅಸಲು ದಾವಾ ಸಂಖ್ಯೆ -161/2018
ಪಿಡಬ್ಲ್ಯು - 01

ದಿನಾಂಕಃ 06.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ- ವಾದಗಳ ಪರ ಶ್ರೀ ವಿ ಬಿ ಟಿ ವಕೀಲರಿಂದ.**

ಈ ದಾವೆಯಲ್ಲಿ ನಾನು ವಾದಿಯಾಗಿದ್ದು, ಇಂದು ನಾನು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಇದರಲ್ಲಿ ಬರೆದ ಎಲ್ಲ ವಿಷಯ ಸತ್ಯವಿದ್ದು ಮತ್ತು ಹೆಬ್ಬಟ್ಟಿನ ಗುರುತು ನನ್ನದೇ ಇರುತ್ತವೆ.

ಆಸ್ತಿ ಸಂಖ್ಯೆಃ 468/ ಪ್ಲಾಟ ಸಂಖ್ಯೆಃ 8 ರ ಕರ ನಿರ್ಧಾರಣ ಪಟ್ಟಿಯ ದೃಡಿಕೃತ ನಕಲನ್ನು ಹಾಜುರಪಡಿಸಿದ್ದು ನಿಪಿ-1 ಎಂದು, ಆಸ್ತಿ ಸಂಖ್ಯೆಃ 469/ ಪ್ಲಾಟ ಸಂಖ್ಯೆಃ 9, ಆಸ್ತಿ ಸಂಖ್ಯೆಃ 469/1 ಮತ್ತು 469/2 ರ ಒಂದು ಪ್ಲಾಟ ಸಂಖ್ಯೆಃ 9 ಕರ ನಿರ್ಧಾರಣ ಪಟ್ಟಿಯ ದೃಡಿಕೃತ ನಕಲನ್ನು ಹಾಜುರಪಡಿಸಿದ್ದು ನಿಪಿ- 2 ಎಂದು, ಜಲ್ಲಾಪೂರ ಗ್ರಾಮದ ಸರ್ವೆ ನಂ. 87 /1 ಪ್ಲಾಟ ಸಂಖ್ಯೆಃ 8 ಪಹಣಿ ಪತ್ರಿಕೆಯನ್ನು ಹಾಜುರಪಡಿಸಿದ್ದು ನಿಪಿ-3 ಎಂದು, ಅದೇ ಗ್ರಾಮದ ಸರ್ವೆ ನಂ. 87 /1 ಎ ಪ್ಲಾಟ ಸಂಖ್ಯೆಃ 4 ರ ಪಹಣಿ ಪತ್ರಿಕೆಯನ್ನು ಹಾಜುರಪಡಿಸಿದ್ದು ನಿಪಿ-4 ಎಂದು, 3 ಛಾಯ ಚಿತ್ರಗಳು ಮತ್ತು ಅವುಗಳಿಗೆ ಸಂಬಂಧಿಸಿದೆ ಎಂದು ಹೇಳುವ ಒಂದು ಸಿಡಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 5 ರಿಂದ ನಿಪಿ- 8 ಎಂದು, ದಿನಾಂಕಃ 02-05-1996 ರ ಮೂಲ ನೊಂದಾಯಿತ ಖರೀದಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 9 ಎಂದು, ದಿನಾಂಕಃ 20-09-1996 ರ ಗ್ರಾಮಪಂಚಾಯತ ಠರಾವಿನ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 10 ಎಂದು, ಜಲ್ಲಾಪುರ ಗ್ರಾಮದ ಸರ್ವೆ ನಂ. 87/1 ಎ ಪ್ಲಾಟ ಸಂಖ್ಯೆಃ 8 ಎರಡು ಕೈಬರವಣಿಗೆಯ ಪಹಣಿ ಪತ್ರಗಳ ದೃಡಿಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ- 11 ಮತ್ತು 12 ಎಂದು, ಡಾ ಸಂಖ್ಯೆಃ 1823 ರ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ನಿಪಿ- 13 ಎಂದು, ಡಾ ಸಂಖ್ಯೆಃ 1923 ರ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ನಿಪಿ- 14 ಎಂದು, ದಿನಾಂಕಃ 28-06-2017 ರ ಕಚೇರಿಯ ನೋಟಿಸ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ- 15 ಎಂದು, ಎರಡು ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ನಿಪಿ- 16 ಮತ್ತು 17 ಎಂದು, ಎರಡು ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ- 18 ಮತ್ತು 19 ಎಂದು, ದಿನಾಂಕಃ 03-07-2017 ರ ಪ್ರತ್ಯುತರವನ್ನು ಹಾಜರುಪಡಿಸಿದ್ದು ನಿಪಿ- 20 ಎಂದು, ದಿನಾಂಕಃ 06-10-2012 ರ ಮತ್ತೂಂದು ಪ್ರತ್ಯುತರವನ್ನು ಹಾಜರುಪಡಿಸಿದ್ದು ನಿಪಿ- 21 ಎಂದು, ಒಂದು ಅಂಚೆ ರಶೀದ ಮತ್ತು ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ- 22 ಮತ್ತು 23 ಎಂದು, ದಿನಾಂಕಃ 27-10-2017 ರ ಮತ್ತೊಂದು ಪ್ರತ್ಯುತರವನ್ನು ಹಾಜರುಪಡಿಸಿದ್ದು ನಿಪಿ- 24 ಎಂದು, ಮತ್ತು ಪಿ.ಟಿ ಶೀಟನ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದಿನ್ನು ನಿಪಿ- 25 ಎಂದು

ಗುರುತಿಸಲಾಯಿತು.

**<u>ಪಾಟೀ ಸವಾಲುಃ  ಪ್ರತಿವಾದಿಗಳ ಪರ ಶ್ರೀ ಎಮ ಎಸ ಬಿ  ವಕೀಲರಿಂದ</u>**

ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರು. ನ್ಯಾಯ ಮತ್ತು ಸಮ್ಮತತೆಯ ಆಧಾರದ ಮೇಲೆ ಪಾಟೀ ಸವಾಲಿಗೆ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು